ಆ) ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯು ಸಿಂಧಗಿ ತಾಲ್ಲೂಕಿನಲ್ಲಿ 2014–15 ನೇ ಶೈಕ್ಷಣಿಕ ಸಾಲಿನಿಂದ ಕಾರ್ಯನಿರ್ವಹಿಸುವುದು.

Governement Industrial Training Instituite will sanction Sindhagi taluk from academic year 2014-15.

ಇ)

ಮೀನುಗಾರಿಕೆ ಅಭಿವೃದ್ಧಿ

212(256); ಶ್ರೀ ಬುಸನೂರ್ ರಮೇಶ್ ಬಾಳಪ್ಪ (ಸಿಂಧಗಿ)

ಅ) ಬಿಜಾಪುರ ಜಿಲ್ಲೆಯ ಸಿಂದಗಿ ತಾಲ್ಲೂಕಿನ ಯಾವುದೇ ಮೀನುಗಾರಿಕೆ ಕಛೇರಿಗಳು ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಸಿಂದಗಿ ತಾಲ್ಲೂಕಿನಲ್ಲಿ ಸಾಕಷ್ಟು ಕಾಲುವೆಗಳು (ಕ್ಯಾನಲ್) ಹಾದು ಹೋಗಿದ್ದು, ಅವುಗಳ ಮತ್ತು ತಾಲ್ಲೂಕಿಗೆ ಹೊಂದಿ ಕೊಂಡಿರುವ ಭೀಮಾ ನದಿ ಅಚ್ಚುಕಟ್ಟು ಪ್ರದೇಶಗಳಲ್ಲಿ ಸಾಕಷ್ಟು ಜೌಗು ಮತ್ತು ಚವಳು ಪ್ರದೇಶಗಳಿದ್ದು, ಇವುಗಳಲ್ಲಿ ಮೀನುಗಾರಿಕೆ ಅಭಿವೃದ್ಧಿ ಪಡಿಸಲು ಸಾಕಷ್ಟು ಅವಕಾಶಗಳಿದ್ದು, ಈ ಕುರಿತು ಸರ್ಕಾರ ಕ್ರಮ ಕೈಗೊಳ್ಳುವುದೇ;

ಇ) ಸಿಂದಗಿ ತಾಲ್ಲೂಕಿನಲ್ಲಿ ಸುಮಾರು 20 ಕೆರೆಗಳು ಮತ್ತು 920 ಹೆಕ್ಟೇರ್ ಪ್ರದೇಶ ಜಲವಿಸ್ತೀರ್ಣ ಇಲಾಖೆ ಅಧಿನದಲ್ಲಿ ಮತ್ತು 16 ಕೆರೆಗಳು ಮತ್ತು 728 ಹೆಕ್ಟೇರ್ ಪ್ರದೇಶ ಜಲವಿಸ್ತೀರ್ಣ ಗ್ರಾ. ಪಂ. (ಗ್ರಾಮ ಪಂಚಾಯತ್) ಅಧೀನದಲ್ಲಿರುವ ಕಾರಣ, ಸಿಂದಗಿ ತಾಲ್ಲೂಕಿನಲ್ಲಿ ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇಣಿ–2) ಅಥವಾ ಹಿರಿಯ ಮೇಲ್ವಿಚಾರಕರ ಕಛೇರಿ ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಇ) ಹಾಗಿದ್ದಲ್ಲಿ ಸಿಂದಗಿ ತಾಲ್ಲೂಕಿನಲ್ಲಿ ಈ ಕಛೇರಿಗಳನ್ನು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಕೆ. ಅಭಯಚಂದ್ರ (ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು)

ಅ) ಹೌದು

ಆ) ಮೀನುಗಾರಿಕೆ ಅಭಿವೃದ್ಧಿ ದೃಷ್ಟಿಯಿಂದ ಸಿಂದಗಿ ತಾಲ್ಲೂಕಿನ ಎಲ್ಲಾ ಜಲಸಂಪನ್ಮೂಲಗಳನ್ನು ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇಣಿ–2), ಬಿಜಾಪುರರವರ ಕಾರ್ಯವ್ಯಾಪ್ತಿಗೆ ಒಳಪಡಿಸಿದ್ದು, ಅವರ ಮುಖಾಂತರವೇ ಮೀನುಗಾರಿಕೆ ಅಭಿವೃದ್ಧಿ ಚಟುವಟಿಕೆಗಳನ್ನು ಕೈಗೊಳ್ಳಲಾಗುತ್ತಿದೆ.

ಇ) ಸಿಂದಗಿ ತಾಲ್ಲೂಕಿನ ಎಲ್ಲಾ ಲಭ್ಯವಿರುವ ಸಂಪನ್ಮೂಲಗಳನ್ನು ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇಣಿ–2), ವಿಜಾಪುರ ರವರ ಮುಖಾಂತರ ಅಭಿವೃದ್ಧಿ ಪಡಿಸಲಾಗುತ್ತಿರುವುದರಿಂದ, ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇಣಿ–2),/ ಮೀನುಗಾರಿಕೆ ಹಿರಿಯ ಮೇಲ್ವಿಚಾರಕರು, ಸಿಂದಗಿ ಕಛೇರಿಯನ್ನು ಹೊಸದಾಗಿ ತೆರೆಯುವ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ರಾಜ್ಯದಲ್ಲಿ ಆನೆಗಳ ದಾಳಿ

213 (257)' ಶ್ರೀ ಚೆಲುವ ನಾರಾಯಣ ಸ್ವಾಮಿ ಎನ್. (ನಾಗಮಂಗಲ)

ಅ) ಕಳೆದ ಮೂರು ವರ್ಷಗಳಿಂದ ರಾಜ್ಯದಲ್ಲಿ ಎಲ್ಲೆಲ್ಲಿ ಆನೆಗಳ, ಆನೆಗಳ ಹಿಂಡಿನ ದಾಳಿ ರೈತರ ಜಮೀನಿನ ಮೆಲೆ, ಹಳ್ಳಿ ನಗರಗಳ ಮೇಲೆ ನಡೆದಿದೆ;